# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ವೃಷಭಾವತಿನಗರ ವಾರ್ಡ್–102,
3ನೇ ಮುಖ್ಯರಸ್ತೆ, ಬಿ.ಇ.ಎಮ್.ಎಲ್. ಲೇಔಟ್, ಬೆಂಗಳೂರು-79.


ಸಂಖ್ಯೆ: ವಾ–102/ವಾ.ಸ./ಸಭಾನಡವಳಿ–14/2021–22 ದಿನಾಂಕ: 17/04/2021

## –:ಸಭೆಯ ನಡವಳಿಗಳು:–

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 17/04/2021 ಶನಿವಾರದಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್–102 ವೃಷಭಾವತಿನಗರದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ.ಜಿ.ಪ್ರಕಾಶ್ ಸಮಿತಿಯ ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್–19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:-**

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ |
|---|---|
| 1 | ಶ್ರೀ ಕೆ.ವಿಜಯ್ ಶೇಖರ್, ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ, ವಾರ್ಡ್–102 |
| 2 | ಶ್ರೀ ಜಿ.ಪ್ರಕಾಶ್, ಕಾರ್ಯದರ್ಶಿ ವಾರ್ಡ್ ಸಮಿತಿ ಮತ್ತು ಸಹಾಯಕ ಅಭಿಯಂತರರು, ವಾರ್ಡ್–102. |
| 3 | ಶ್ರೀ ಜಿ.ಆರ್.ಗೋವಿಂದ ರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–102 |
| 4 | ಶ್ರೀ ಕೆ.ವಿ. ಲೋಕೇಶ್, ಹಿರಿಯ ವೆಟರಿನರಿ ಪರಿವೀಕ್ಷಕರು, ಬಿಬಿಎಂಪಿ. |
| 5 | ಶ್ರೀ ಎಸ್.ಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು, (ಗುತ್ತಿಗೆ) ವಾರ್ಡ್–102 |
| 6 | ಶ್ರೀ ಹರೀಶ್ ಎಮ್. ಟ್ಯಾಕ್ಸ್ ಇನ್ಸ್‌ಪೆಕ್ಟರ್, ವಾರ್ಡ್–102. |
| 7 | ಶ್ರೀ ಶೇಖರ್ ನಾಯಕ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ. |
| 8 | ಶ್ರೀ ವಿನೋದ್, ವಾರ್ಡ್ ಮಾರ್ಷಲ್, ಬಿಬಿಎಂಪಿ. |
| 9 | ಶ್ರೀ ಚಂದ್ರಪ್ಪ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 10 | ಶ್ರೀಮತಿ ಗೌರಮ್ಮ, ಸದಸ್ಯರು, ವಾರ್ಡ್ ಸಮಿತಿ, ವಾರ್ಡ್–102. |
| 11 | ಶ್ರೀ ದೇವರಾಜು, ಸದಸ್ಯರು, ವಾರ್ಡ್ ಸಮಿತಿ, ವಾರ್ಡ್–102. |
| 12 | ಶ್ರೀಮತಿ ಸಿದ್ದಗಂಗಮ್ಮ, ಸದಸ್ಯರು, ವಾರ್ಡ್ ಸಮಿತಿ, ವಾರ್ಡ್–102. |
| 13 | ಶ್ರೀ ರಾಜ್ ಕುಮಾರ್, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 14 | ಶ್ರೀಮತಿ ಪ್ರೇಮ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |

ಮು.ತಿ.ನೋ.

Scanned with CamScanner

## ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ 2ನೇ ಅಲೆಯನ್ನು ಹತೋಟಿಗೆ ತರಲು ತೆಗೆದುಕೊಂಡಿರುವ ಮುನ್ನೆಚ್ಚರಿಕೆ ಕ್ರಮಗಳನ್ನು ಸಭೆಯಲ್ಲಿ ತಿಳಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
- ಶ್ರೀಗೋವಿಂದರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಸದರಿ ವಾರ್ಡ್‌ನಲ್ಲಿ ಇಲ್ಲಿಯವರೆವಿಗೆ ಒಟ್ಟು 108 ಕೋವಿಡ್ ಸೋಂಕಿತರು ಪತ್ತೆಯಾಗಿದ್ದು, ಅದರಲ್ಲಿ 17 ಜನ ಸೋಂಕಿತರನ್ನು ಹಾಸ್ಪಿಟಲೈಜೇಷನ್ ಹಾಗೂ ಉಳಿದ 91 ಜನ ಸೋಂಕಿತರನ್ನು ಹೋಮ್ ಐಸೋಲೇಷನ್‌ನಲ್ಲಿ ಇರಿಸಲಾಗಿದೆ. ಮತ್ತು 03 ಜನರು ಸಾವಿಗೀಡಾಗಿರುತ್ತಾರೆ ಎಂದು ತಿಳಿಸುತ್ತಾ, ಎಸ್.ಓ.ಪಿ. ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದೇವೆ ಎಂದು ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ 45 ವರ್ಷ ಮೇಲ್ಪಟ್ಟ ನಾಗರೀಕರಿಗೆ ವ್ಯಾಕ್ಸಿನೇಷನ್ ಮಾಡುವ ಕಾರ್ಯದ ಪ್ರಗತಿಯ ಬಗ್ಗೆ ತಿಳಿಸುವಂತೆ ಹೇಳಿದರು.
- ಶ್ರೀಗೋವಿಂದರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಮಾರುತಿ ಶಾಲೆ, ರಾಘವೇಂದ್ರ ಶಾಲೆ ಹಾಗೂ ಮೌರ್ಯ ಶಾಲೆಗಳಲ್ಲಿ ಪ್ರತಿ ದಿನ ಸುಮಾರು 30 ಜನರಿಗೆ ವ್ಯಾಕ್ಸಿನೇಷನ್ ಮಾಡುವ ಕಾರ್ಯ ನಡೆಸಲಾಗುತ್ತಿದ್ದು, ಕೆಲವು ವೃದ್ಧರು ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಸ್ವಂತ ವೆಚ್ಚದಲ್ಲಿ ವ್ಯಾಕ್ಸಿನೇಷನ್ ಪಡೆದುಕೊಂಡಿರುವುದಾಗಿ ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಹೆಚ್ಚಾಗಿ ಜನ ಸೇರುವಂತಹ ಸ್ಥಳಗಳಾದ, ಸಿನಿಮಾ ಥಿಯೇಟರ್, ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಕಲ್ಯಾಣ ಮಂಟಪ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕೆಂದು ಅರಿವು ಮೂಡಿಸಬೇಕೆಂದು ಮಾರ್ಷಲ್ಸ್‌ಗಳಿಗೆ ಸೂಚಿಸಿದರು.
- ಶ್ರೀವಿನೋದ್, ವಾರ್ಡ್ ಮಾರ್ಷಲ್ ರವರು ಮಾತನಾಡುತ್ತಾ, ಈಗಾಗಲೇ ಕಲ್ಯಾಣ ಮಂಟಪಗಳಿಗೆ ಹಾಗೂ ಇತರೆ ಜನ ಸಂದಣಿ ಹೆಚ್ಚಾಗಿ ಕಂಡುಬರುವ ಸ್ಥಳಗಳಿಗೆ ಕೋವಿಡ್-19 ಸಾಂಕ್ರಾಮಿಕ ರೋಗದ ಮುನ್ನೆಚ್ಚರಿಕೆ ಕ್ರಮಗಳ ಪ್ರಕಟಣೆ ಹೊರಡಿಸಲಾಗಿದ್ದು, ಸಭೆ ಸಮಾರಂಭಗಳು ನಡೆಯುವ ಸ್ಥಳಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಲಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.
- ಶ್ರೀದೇವರಾಜು, ವಾರ್ಡ್ ಸಮಿತಿ ಸದಸ್ಯರು ರವರು ಮಾತನಾಡುತ್ತಾ, ಸೋಂಕಿತರು ಪತ್ತೆಯಾದ ಸ್ಥಳಗಳಲ್ಲಿ ಹಾಗೂ ಸಾರ್ವಜನಿಕರು ಹೆಚ್ಚಾಗಿ ಸೇರುವಂತಹ ಸ್ಥಳಗಳಲ್ಲಿ ಸ್ಯಾನಿಟೈಜೇಷನ್ ಮಾಡುವಂತೆ ಕೋರಿದರು.
- ಶ್ರೀ ಗೋವಿಂದರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡುತ್ತಾ, ಸೂಕ್ತ ಕ್ರಮ ಕೈಗೊಂಡು ಸ್ಯಾನಿಟೈಜೇಷನ್ ಮಾಡಲಾಗುವುದೆಂದು ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಸೋಂಕಿತರೊಂದಿಗಿನ ಪ್ರಥಮ ಹಾಗೂ ದ್ವಿತೀಯ ಸಂಪರ್ಕಿತರನ್ನು ಟ್ರೇಸಿಂಗ್ ಮಾಡುವ ಕಾರ್ಯವನ್ನು ಮಾಡಿ ಅವರಿಗೂ ಕೋವಿಡ್-19 ಪರೀಕ್ಷೆಯನ್ನು ಮಾಡಿಸಿಕೊಳ್ಳುವಂತೆ ಹಾಗೂ ಹೊರಗಡೆ ತಿರುಗಾಡದಂತೆ ಸಲಹೆ ನೀಡುವ ಕಾರ್ಯವನ್ನು ಮಾಡಬೇಕಾಗಿ ಸಭೆಯಲ್ಲಿ ತಿಳಿಸಿದರು.

2) **ಅಭಿಯಂತರರ ವಿಭಾಗದ ಬಗ್ಗೆ:-**

- ಶ್ರೀ ದೇವರಾಜು, ವಾರ್ಡ್ ಸಮಿತಿ ಸದಸ್ಯರು ರವರು ಮಾತನಾಡುತ್ತಾ, ಡಾಂಬರೀಕರಣ ಮಾಡಿರುವ ಪ್ರದೇಶಗಳಲ್ಲಿ ಡೆಬ್ರಿಸ್‌ಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ದೂರಿದರು.
- ಸಹಾಯಕ ಅಭಿಯಂತರರು ಮಾತನಾಡುತ್ತಾ, ಸ್ಥಳಗಳನ್ನು ಗುರುತಿಸಿ ಶೀಘ್ರವಾಗಿ ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ಶ್ರೀ ದೇವರಾಜು, ವಾರ್ಡ್ ಸಮಿತಿ ಸದಸ್ಯರು ರವರು ಮಾತನಾಡುತ್ತಾ, ಮಾರಮ್ಮ ಟೆಂಪಲ್ ರಸ್ತೆಯಲ್ಲಿ ಅಳವಡಿಸಲಾಗಿರುವ ಸಿಸಿ ಕ್ಯಾಮೆರಾ ಪೋಲ್ ಅನ್ನು ದುರಸ್ಥಿಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.
- ಸಹಾಯಕ ಅಭಿಯಂತರರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವ ಕಾಮಗಾರಿಯು ಚಾಲ್ತಿಯಲ್ಲಿದ್ದು, ಸ್ಥಳ ಗುರುತಿಸಿ ಕ್ರಮಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಪು.ತಿ.ನೋ.

Scanned with CamScanner

3) <u>ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-</u>

- ಶ್ರೀ ಎಸ್. ಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ಹೊಸದಾಗಿ ಟೆಂಡರ್ ಅನುಮೋದನೆಯಾಗಿದ್ದು, ಅದರಲ್ಲಿ 22 ಹೊಸ ಆಟೋ, 2 ವೆಟ್ ಕಾಂಪ್ಯಾಕ್ಟರ್‌ಗಳು ಮತ್ತು 1 ಡ್ರೈ ಕಾಂಪ್ಯಾಕ್ಟರ್‌ಗಳು ಕಾರ್ಯಾಚರಣೆಯಲ್ಲಿರುತ್ತವೆ ಎಂದು ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುವ ಪೌರಕಾರ್ಮಿಕರಿಗೆ ಕೋವಿಡ್-19 ಪರೀಕ್ಷೆಯನ್ನು ಮಾಡಿಸಿಕೊಳ್ಳುವಂತೆ ಜಾಗೃತಿ ಮೂಡಿಸಲು ಸಭೆಯಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಿದರು.
- ಶ್ರೀ ದೇವರಾಜು ಮತ್ತು ಶ್ರೀ ರಾಜ್‌ಕುಮಾರ್, ವಾರ್ಡ್ ಸಮಿತಿ ಸದಸ್ಯರು ರವರು ಮಾತನಾಡುತ್ತಾ, ಎನ್.ಜಿ.ಓ'ಸ್ ಕಾಲೋನಿಯ ಹತ್ತಿರ ಇರುವ ಹೊರಾಂಗಣ ವ್ಯಾಯಾಮ ಕೂಟದ ಬಳಿಯಲ್ಲಿ ಹಾಗೂ ಮಾರಮ್ಮ ದೇವಸ್ಥಾನದ ಬಳಿ ಪೌರಕಾರ್ಮಿಕರು ಕಸವನ್ನು ಹಾಕುತ್ತಿದ್ದಾರೆಂದು ಮತ್ತು ಸಣ್ಣಕ್ಕಿ ಬಯಲು ಅಡ್ಡರಸ್ತೆಗಳಲ್ಲಿ ಕಸವನ್ನು ಗುಡಿಸುತ್ತಿರುವುದಿಲ್ಲವೆಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಆಯಾ ಮೇಸ್ತ್ರಿಗಳಿಗೆ ಸಂಬಂಧಪಟ್ಟ ಬ್ಲಾಕ್‌ಗಳಲ್ಲಿ ಗ್ಯಾಂಗ್ ವರ್ಕ್ ಮಾಡಿಸಿಕೊಂಡು ಶೀಘ್ರವಾಗಿ ಕಸವನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಸೂಚಿಸಿದರು.

4) <u>ಕಂದಾಯ ವಿಭಾಗದ ಬಗ್ಗೆ:-</u>

- ಮಾನ್ಯ ನೋಡಲ್ ಅಧಿಕಾರಿ ರವರು ಮಾತನಾಡುತ್ತಾ, ಚುನಾವಣಾ ಕಾರ್ಯಗಳಿಗೆ ಸಂಬಂಧಿಸಿದಂತೆ ಜನಗಣತಿ ಸರ್ವೆ ಮಾಡುವುದು ಹಾಗೂ ಇನ್ನಿತರೆ ಚುನಾವಣಾ ಕಾರ್ಯಗಳಿಗೆ ಸಂಬಂಧಿಸಿದಂತೆ ತೊಡಗಿಸಿಕೊಳ್ಳಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ ಹರೀಶ್, ಟ್ಯಾಕ್ಸ್‌ಇನ್ಸ್‌ಪೆಕ್ಟರ್ ರವರಿಗೆ ಸಭೆಯಲ್ಲಿ ತಿಳಿಸಿದರು.
- ಶ್ರೀ ಹರೀಶ್, ಟ್ಯಾಕ್ಸ್‌ಇನ್ಸ್‌ಪೆಕ್ಟರ್ ರವರು ಮಾತನಾಡುತ್ತಾ, ಸದರಿ ವಿಷಯವಾಗಿ ಸೂಕ್ತ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

5) <u>ಪಶುಪಾಲನಾ ವಿಭಾಗದ ಬಗ್ಗೆ:-</u>

- ಶ್ರೀಮತಿ ಪ್ರೇಮ, ವಾರ್ಡ್ ಸಮಿತಿ ಸದಸ್ಯರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಅವುಗಳನ್ನು ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಸಭೆಯಲ್ಲಿ ಕೋರಿದರು.
- ಹಿರಿಯ ವೆಟರಿನರಿ ಪರಿವೀಕ್ಷಕರಾದ ಶ್ರೀ ಕೆ.ವಿ. ಲೋಕೇಶ್ ರವರು ಮಾತನಾಡುತ್ತಾ, ಈಗಾಗಲೇ ವಾರ್ಡ್ ವ್ಯಾಪ್ತಿಯಲ್ಲಿನ ಗಂಗಣ್ಣ ಬಡಾವಣೆಯ ಹಾಗೂ ಸಣ್ಣಕ್ಕಿಬಯಲು ವ್ಯಾಪ್ತಿಯಲ್ಲಿ ಬೀದಿ ನಾಯಿಗಳನ್ನು ಹಿಡಿದು ಅವುಗಳಿಗೆ ವ್ಯಾಕ್ಸಿನ್ ಹಾಗೂ ಆಪರೇಷನ್ ಮಾಡಿ ಸದರಿ ಸ್ಥಳಗಳಿಗೆ ಹಿಂತಿರುಗಿಸುವ ಕಾರ್ಯವನ್ನು ಮಾಡಲಾಗಿರುವುದಾಗಿ, ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಂಡ ಕಾರ್ಯಾಚರಣೆಯ ಬಗ್ಗೆ ಆಗಾಗ್ಗೆ ವಾಟ್ಸ್‌ಆಪ್‌ನಲ್ಲಿ ವರದಿ ಮಾಡಲಾಗುತ್ತಿರುವುದಾಗಿ ಸಭೆಗೆ ತಿಳಿಸಿದರು.

6) <u>ವಿದ್ಯುತ್ ವಿಭಾಗದ ಬಗ್ಗೆ:-</u>

- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣಾ ಕಾರ್ಯದ ಬಗ್ಗೆ ಯಾವುದಾದರೂ ದೂರುಗಳಿವೆಯೇ? ಎಂದು ಸಭೆಯಲ್ಲಿ ಚರ್ಚಿಸಿದರು.
- ಇದಕ್ಕೆ ಉತ್ತರವಾಗಿ ಪರವಾಗಿ ಶ್ರೀ ಗೋವಿಂದಪ್ಪ, ಗುತ್ತಿಗೆದಾರರು, ಬೀದಿ ದೀಪಗಳ ನಿರ್ವಹಣೆ, ರವರು ಮಾತನಾಡುತ್ತಾ, ಬೀದಿ ದೀಪಗಳ ಬಗ್ಗೆ ದೂರುಗಳು ಬಂದ ತಕ್ಷಣವೇ ತುರ್ತಾಗಿ ಸೂಕ್ತ ಕ್ರಮವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು.

7) <u>ಅರಣ್ಯ ವಿಭಾಗದ ಬಗ್ಗೆ:-</u>

- ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ಅರಣ್ಯ ಇಲಾಖೆಯ ವತಿಯಿಂದ ವಾರ್ಡ್ ವ್ಯಾಪ್ತಿಯಲ್ಲಿ ಗಿಡ ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಬಂಧ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಮುಂದಿನ ಸಭೆಯಲ್ಲಿ ಭಾಗವಹಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು.

ಪು.ತಿ.ನೋ.

Scanned with CamScanner

8) <u>ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:-</u>

- ಶ್ರೀ ಚಂದ್ರಪ್ಪ, ವಾರ್ಡ್ ಸಮಿತಿ ಸದಸ್ಯರು ರವರು ಮಾತನಾಡುತ್ತಾ, 4ನೇ'ಇ'ಅಡ್ಡರಸ್ತೆಯಲ್ಲಿ ಕುಡಿಯುವ ನೀರು ಪೋಲಾಗುತ್ತಿರುವುದಾಗಿ ಸಭೆಯಲ್ಲಿ ದೂರಿದರು.
- ಶ್ರೀದಿನೇಶ್, ಕಾಮಗಾರಿ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ದೂರವಾಣಿಯ ಮುಖಾಂತರ ವಾಲ್ ಆಪರೇಟರ್‌ರವರಿಗೆ ಮಾತನಾಡುತ್ತಾ, ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದರು.
- ಶ್ರೀ ದೇವರಾಜು, ವಾರ್ಡ್ ಸಮಿತಿ ಸದಸ್ಯರು ರವರು ಮಾತನಾಡುತ್ತಾ, ಮಾರಮ್ಮ ರಸ್ತೆ, ಚಂದ್ರಪ್ಪ ರಸ್ತೆ ಮತ್ತು ಕುವೆಂಪು ರಸ್ತೆಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ತೆಗೆದಿರುವ ಸಿಲ್ಟ್ ಅನ್ನು ತೆರವುಗೊಳಿಸದೇ ಹಾಗೇ ಬಿಟ್ಟಿರುವುದಾಗಿ ಸಭೆಯಲ್ಲಿ ದೂರಿದರು.
- ಶ್ರೀ ದಿನೇಶ್, ಕಾಮಗಾರಿ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರು ಮಾತನಾಡುತ್ತಾ, ಸದರಿ ಸ್ಥಳಗಳನ್ನು ಪರಿಶೀಲಿಸಿ ಸೂಕ್ತ ಕ್ರಮವಹಿಸಿ ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.
- ಶ್ರೀ ಚಂದ್ರಪ್ಪ, ವಾರ್ಡ್ ಸಮಿತಿ ಸದಸ್ಯರು ರವರು ಮಾತನಾಡುತ್ತಾ, ಎನ್.ಜಿ.ಓ'ಸ್ ಕಾಲೋನಿಯ ವ್ಯಾಪ್ತಿಯಲ್ಲಿ ಪ್ರತೀದಿನ ಕುಡಿಯುವ ನೀರಿನ ತೊಂದರೆ ಉಂಟಾಗಿರುತ್ತದೆ ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಬೋರ್‌ವೆಲ್ ದುರಸ್ಥಿ ಮಾಡಲು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಗುತ್ತಿಗೆ ಪಡೆದ ಗುತ್ತಿಗೆದಾರರಾದ ಶ್ರೀ ರಾಘವೇಂದ್ರ ರವರಿಗೆ ಸರಿಯಾದ ರೀತಿಯಲ್ಲಿ ದುರಸ್ಥಿ ಕಾರ್ಯವನ್ನು ತುರ್ತಾಗಿ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ **ವಾರ್ಡ್ ಕಮಿಟಿ ವಾರ್ಡ್-102 ವಾಟ್ಸ್ ಆಪ್ ಗ್ರೂಪ್** ನಲ್ಲಿ ಮತ್ತು ಪ್ರತಿ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ನೋಡಲ್ ಅಧಿಕಾರಿಯವರು ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ-102

ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್-102

<u>ಪ್ರತಿಯನ್ನು</u> :-

1) ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2) ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3) ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4) ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5) ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6) ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7) ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8) ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9) ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10) ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11) ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12) ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13) ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14) ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15) ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16) ಕಛೇರಿಯ ಕಡತಕ್ಕೆ.

Scanned with CamScanner

ವಾರ್ಡ್ ಸಂಖ್ಯೆ - 102 ವೃಷಭಾವತಿನಗರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ದಿನಾಂಕ: 17/04/2021 ರಂದು ಬೆಳಿಗ್ಗೆ 10.00 ಗಂಟೆಗೆ.

ವಾರ್ಡ್ ಮಟ್ಟದ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗು RWA's ಸದಸ್ಯರುಗಳ ಹಾಜರಾತಿ ತೆಗೆದುಕೊಳ್ಳಲಾಗಿರುತ್ತದೆ.

| ಕ್ರಮ ಸಂಖ್ಯೆ | ಹೆಸರು | ಪದನಾಮ ಇಲಾಖೆ. | ಮೊಬೈಲ್ ಸಂಖ್ಯೆ | ಸಹಿ |
|---|---|---|---|---|
| 1) | ವಿಜಯಶೇಖರ.K | ನೋಡೆಲ್ ಅಧಿಕಾರಿ | 9448670084 | [signature] 17/4/2021 |
| 2) | ಪ್ರಕಾಶ್.ಜಿ | ಕಾರ್ಯದರ್ಶಿ, w-102 | 9845236847 | [signature] 17/4/2021 |
| 3) | ಗೋವಿಂದರಾಜುಲು | SHI | 9845512187 | [signature] |
| 4) | ಜಿ. ಆರ್. ಮಂಜುನಾಥ್ | T.I | 9743557879 | |
| 5) | ಸಿದ್ದರಾಜು | AE, Bescom | 9449870177 | |
| 6) | ವಿನೋದ್ | Marshal w-102 | 9663084662 | Vinod.S |
| 7) | ಬಾಬು | JHI, w-102 | 9632549664 | S. Babu |
| 8) | ಶೇಖರ್ ನಾಯಕ್ | BWSSB AE | 9845444074 | [signature] |
| 9) | K.V ಲೋಕೇಶ್ | Veterinary | 9480683056 | [signature] (SrVI) |
| 10) | ರಂಗನಾಥ್ | AEE, Nagapura | 9480685316 | |
| 11) | ಶಿವಣ್ಣ. ಬಿ. | ನಿವೃತ್ತರು | 8095353731 | |
| 12) | ಚಂದ್ರಪ್ಪ | ಸದಸ್ಯರು | 9845763281 | [signature] |
| 13) | ದೇವರಾಜು | ಸದಸ್ಯರು | 9632584986 | [signature] |

Scanned with CamScanner

| | | | | |
|---|---|---|---|---|
| 14) | ರಂಗನಾಥ್. C | ಸದಸ್ಯರು | 9341199998 | |
| 15) | ಶಿವಗಂಗಮ್ಮ | —〃— | 990239918 | ಶಿವಗಂಗಮ್ಮ |
| 16) | ಪ್ರೇಮ | —〃— | 9632728915 | Prema |
| 17) | ಗೌರಮ್ಮ | —〃— | 9740249333 | K. Gowri |
| 18) | ಹೇಮಂತಕುಮಾರ್ | —〃— | 9448362208 | |
| 19) | ರಾಜ್‌ಕುಮಾರ್ | —〃— | 8553779344 | [illegible] |
| 20) | ಆನಂದ್. ಆರ್. | —〃— | 9741912644 | |
| 21 | ಹರೀಶ. ಎಂ | T. I | 7411692135 | Hari |
| | | | | |
| | | | | |
| | | | | |

Scanned with CamScanner